**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ**

ಸಿ.ಸಿ. ನಂಬರಃ **889/2020**

ದಿಃ **12-01-2023** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಸಿಡಬ್ಲೂಃ **3** ಪಿಡಬ್ಲೂಃ **1**

| | | |
|---|---|---|
| ಹೆಸರು | : | ಭಗಂವತ ಯಲ್ಲಪ್ಪ ಕಾಂಬಳೆ |
| ತಂದೆ ಹೆಸರು | : | ಯಲ್ಲಪ್ಪ ಕಾಂಬಳೆ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಮೆಕ್ಕಲಿ ತಾ ರಾಯಭಾಗ |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-1 ಮತ್ತು 2 ರವರ ಪರಿಚಯವಿದೆ. ಆರೋಪಿಯ ಪರಿಚಯವಿರುವುದಿಲ್ಲ. ಮೃತ ಸಿದ್ದಪ್ಪ ಅರ್ಜುನ ನಾಯಕ ರವರ ಪರಿಚಯವಿರುತ್ತದೆ. ಸದರಿ ಅವರು ಸುಮಾರು 3 ವರ್ಷಗಳ ಹಿಂದೆ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯಲ್ಲಿ ತನ್ನ ಹೆಬ್ಬಟ್ಟಿನ ಗರುತನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಶವ ಪಂಚನಾಮೆ ಆಗಿದ್ದು ಸದರಿ ದಾಖಲೆಯನ್ನು ನಿಪಿ-1 ಎಂದು ಸಾಕ್ಷಿಯ ಹೆಬ್ಬಟ್ಟಿನ ಗುರುತನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸುಮಾರು 3 ವರ್ಷಗಳ ಹಿಂದೆ ಮೃತ ಸಿದ್ದಪ್ಪ ಅರ್ಜುನ ನಾಯಕ ರವರ ಶವ ಪಂಚನಾಮೆಯನ್ನು ಬೆಳಗಾವಿದಲ್ಲಿ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ನಾನು ಹಾಗೂ ಚಾಸಾ-2 ಮತ್ತು 5 ರವರು ಹಾಜರಿದ್ದೆವು. ಸದರಿ ಪಂಚನಾಮೆಯನ್ನು ಯಾವ ಸಮಯದಲ್ಲಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅದೇ ಸಂದರ್ಭದಲ್ಲಿ ಒಂದು ಭಾವಚಿತ್ರವನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿಯ ಸದರಿ ಭಾವಚಿತ್ರದಲ್ಲಿ ತಾನು ಇರುವುದಾಗಿ ಗುರುತಿಸಿದ್ದು

ಸದರಿ ಭಾವಚಿತ್ರವನ್ನು ನಿಶಾನೆಯಾಗಿ ಗುರುತಿಸುವ ಸಂದರ್ಭದಲ್ಲಿ ಆರೋಪಿ ಪರ ವಕೀಲರು ತಕರಾರು ವ್ಯಕ್ತಪಡಿಸಿದ್ದು ಸದರಿ ತಕರಾರಿಗೆ ಒಳಪಟ್ಟು ಸದರಿ ಭಾವಚಿತ್ರವನ್ನು ನಿಪಿ-2 ಎಂದು ನಿಶಾನೆಯಾಗಿ ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಸದರಿ ದಿನದಂದು ಮೃತ ಸಿದ್ದಪ್ಪ ಅರ್ಜುನ ನಾಯಕ ರವರು ಮೃತಪಟ್ಟಿರುತ್ತಾರೆ ಎಂದು ತಿಳಿದ ಕೂಡಲೇ ನಾನು ಬೆಳಗಾವಿನಲ್ಲಿರುವ ಪೋಲಿಸ ಠಾಣೆಗೆ ಹೋಗಿರುತ್ತೇನೆ. ಸದರಿ ಪೋಲಿಸ ಠಾಣೆಯ ಹೆಸರು ನನಗೆ ಗೊತ್ತಿರುವುದಿಲ್ಲ. ಸದರಿ ದಿನದಂದು ಪೋಸ್ಟ ಮಾಟಮ ಮಾಡಲು ನನ್ನನ್ನು ಬೆಳಗಾವಿ ಪೋಲಿಸ ಠಾಣೆಯಿಂದ ಕರೆದುಕೊಂಡು ಹೋಗಿರುತ್ತಾರೆ. ನಿಪಿ-2 ನ್ನು ಪಡೆದುಕೊಳ್ಳುವ ಬಗ್ಗೆ ಹೊರತು ಪಡಿಸಿ ನನಗೆ ಈ ಪ್ರಕರಣದ ಬಗ್ಗೆ ಇನ್ನೆನು ಗೊತ್ತಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ** --ಇಲ್ಲಾ--

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ಶ್ರೀಮತಿ. ಸೂರ್ಯ ಪ್ರಭಾ ಎಚ್.ಡಿ)
ಹೆ.ದಿ.&ನ್ಯಾದಂ.,ಗೋಕಾಕ.

**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ**

ಸಿ.ಸಿ. ನಂಬರಃ **889/2020**

ದಿಃ **12-01-2023** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಸಿಡಬ್ಲೂಃ **4** ಪಿಡಬ್ಲೂಃ **2**

| | | |
|---|---|---|
| ಹೆಸರು | : | ಅಶೋಕ ತಮ್ಮಣ್ಣ ನಾಯಕ |
| ತಂದೆ ಹೆಸರು | : | ತಮ್ಮಣ್ಣ ನಾಯಕ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಮೆಕ್ಕಲಿ, ತಾ ರಾಯಭಾಗ |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-1 ರಿಂದ 3 ಹಾಗೂ 5, 8 ಮತ್ತು 9 ರವರ ಪರಿಚಯವಿದೆ. ಆರೋಪಿಯ ಪರಿಚಯವಿರುವುದಿಲ್ಲ. ಮೃತ ಸಿದ್ದಪ್ಪ ಅರ್ಜುನ ನಾಯಕ ರವರ ಪರಿಚಯವಿರುತ್ತದೆ. ಸದರಿ ಅವರು 2019 ಸಾಲಿನಲ್ಲಿ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಗುನ್ಹಾ ಸ್ಥಳ ಪಂಚನಾಮೆ ಆಗಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ದಿಃ 28-10-2019 ರಂದು ಸಜ್ಜಾಳ ಕ್ರಾಸ ಹತ್ತಿರ ಬೆಳಿಗ್ಗೆ 9 ರಿಂದ 10 ಗಂಟೆ ಸಮಯದವರೆಗೆ ಪೋಲಿಸರು ನನ್ನ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ. ಅದೇ ಸಂದರ್ಭದಲ್ಲಿ ನನ್ನ ಸಹಿಯನ್ನು ನಿಪಿ-3 ದಾಖಲೆಗೆ ಪಡೆದುಕೊಂಡಿರುತ್ತಾರೆ. ಅದೇ ಸಂದರ್ಭದಲ್ಲಿ ಒಂದು ಭಾವಚಿತ್ರವನ್ನು

ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಭಾವಚಿತ್ರದಲ್ಲಿ ತಾನು ಇರುವುದಾಗಿ ಗುರುತಿಸಿದ್ದು ಸದರಿ ಭಾವಚಿತ್ರವನ್ನು ನಿಶಾನೆಯಾಗಿ ಗುರುತಿಸುವ ಸಂದರ್ಭದಲ್ಲಿ ಆರೋಪಿ ಪರ ವಕೀಲರು ತಕರಾರು ವ್ಯಕ್ತಪಡಿಸಿದ್ದು ಸದರಿ ತಕರಾರಿಗೆ ಒಳಪಟ್ಟು ಸದರಿ ಭಾವಚಿತ್ರವನ್ನು ನಿಪಿ-4 ಎಂದು ನಿಶಾನೆಯಾಗಿ ಗುರುತಿಸಲಾಯಿತು. ಈ ಬಗ್ಗೆ ನಾನು ನನ್ನ ಹೇಳಿಕೆಗಳನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ.

ಅಪಘಾತದ ದಿನದಂದು ಮೃತ ಸಿದ್ದಪ್ಪ ನಾಯಕ ರವರು ಚಾಸಾ-1 ರವರೊಂದಿಗೆ ಉದಗಟ್ಟಿ ಗ್ರಾಮದ ಉದ್ದಮ್ಮ ದೇವಿಯ ದೇವಸ್ಥಾನಕ್ಕೆ ಹೋಗಿದ್ದರು. ಸದರಿ ಅವರು ರಸ್ತೆಯ ಬದಿಗೆ ಒಂದಕ್ಕಾಗಿ ಹೋಗಿದ್ದಾಗ ಒಂದು ಕ್ಲೂಜರ ವಾಹನ ಬಂದು ಅವರಿಗೆ ಅಪಘಾತ ಪಡಿಸಿರುತ್ತದೆ. ಸದರಿ ವಿಷಯವನ್ನು ನನಗೆ ಚಾಸಾ-1 ರವರು ತಿಳಿಸಿರುತ್ತಾರೆ. ವಿಷಯ ತಿಳಿದ ನಂತರ ನಾನು ಮರುದಿನ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಈ ಬಗ್ಗೆ ನಾನು ಪೋಲಿಸರಿಗೆ ನನ್ನ ಹೇಳಿಕೆ ಕೊಟ್ಟಿರುತ್ತೇನೆ.

ತದನಂತರ ಪೋಲಿಸರು ನನ್ನನ್ನು ಕುಲಗೋಡ ಪೋಲಿಸ ಠಾಣೆಗೆ ಕರೆದು ಸದರಿ ಪ್ರಕರಣದಲ್ಲಿ ಆರೋಪಿತನಾದ ರಾಯಪ್ಪ ಲಕ್ಕಪ್ಪ ಕೆಮ್ಮನಕೋಲ ರವರನ್ನು ತೋರಿಸಿರುತ್ತಾರೆ. ಸದರಿ ಆರೋಪಿ ಮೃತ ಸಿದ್ದಪ್ಪ ಅರ್ಜುನ ನಾಯಕ ರವರಿಗೆ ಡಿಕ್ಕಿ ಪಡಿಸಿದ ಕ್ಲೂಜರ ವಾಹನದ ಚಾಲಕರು ಆಗಿದ್ದರು ಎಂದು ತಿಳಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೋಲಿಸರಿಗೆ ನನ್ನ ಹೇಳಿಕೆ ಕೊಟ್ಟಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>**

ಸಜ್ಜಾಳ ಕ್ರಾಸ ಗೋಕಾಕ ತಾಲೂಕದಲ್ಲಿ ಬರುತ್ತದೆ. ಮೊದಲಿಗೆ ನನಗೆ ಸಜ್ಜಾಳ ಕ್ರಾಸ ಗೊತ್ತಿರಲಿಲ್ಲ ಎಂದರೆ ಸರಿ. ನನಗೆ ಚಾಸಾ-8 ರವರು ಕರೆ ಮಾಡಿದ ಮೇರೆಗೆ ನಾನು ಮೊದಲಿಗೆ ಸಜ್ಜಾಳ ಕ್ರಾಸಗೆ ಹೋಗಿರುತ್ತೇನೆ. ಗುನ್ನಾ ಸ್ಥಳದ ಚಕಬಂದಿ ಹೇಳಲು

ಆಗುವುದಿಲ್ಲ. ಘಟನಾ ಸ್ಥಳದಲ್ಲಿ ಸೇತುವೆ ಇರುತ್ತದೆ ಎಂದು ತೋರಿಸಿದ್ದು ಸದರಿ ಸೇತುವೆಯಿಂದ 50 ಪೂಟ ಅಂತರದಲ್ಲಿ ಯಾರ ಹೊಲ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಸದರಿ ಸೇತುವೆಯ ಉತ್ತರ ದಿಕ್ಕಿಗೆ 15 ಪೂಟದಲ್ಲಿ ಯಾರ ಹೊಲ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಘಟನಾ ಸ್ಥಳದ ದಕ್ಷಿಣ ದಿಕ್ಕಿಗೆ 15 ಪೂಟ ದೂರದಲ್ಲಿ ಯಾರ ಹೊಲ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಘಟನಾ ಸ್ಥಳದಲ್ಲಿ ಸಹಿ ಮಾಡಿ ಪೋಟೊ ತೆಗೆದಿರುವ ಬಗ್ಗೆ ಹೊರತು ಪಡಿಸಿ ಇನ್ನೇನು ಗೊತ್ತಿರುವುದಿಲ್ಲ ಎಂದರೆ ಸರಿ. ಸದರಿ ದಿನದಂದು ನನ್ನನ್ನು ಹಾಗೂ ಚಾಸಾ-5 ರವರನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ ಎಂದರೆ ಸರಿ.

ನಾನು ನನ್ನ ಹೇಳಿಕೆಗಳನ್ನು ಪೋಲಿಸ ಠಾಣೆಯಲ್ಲಿ ಕೊಟ್ಟಿರುತ್ತೇನೆ. ನನ್ನ ಹೇಳಿಕೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿರುವುದಿಲ್ಲ ಎಂದರೆ ಸರಿ. ಗಾಡಿ ಪೋಲಿಸ ಠಾಣೆಯಲ್ಲಿ ಇತ್ತು ಗುನ್ನಾ ಸ್ಥಳದಲ್ಲಿ ಇರಲಿಲ್ಲ. ಪೋಲಿಸರು ಹೇಳಿದ ಮೇರೆಗೆ ನನಗೆ ಸದರಿ ಗಾಡಿಯ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಆರೋಪಿಯನ್ನು ಇದೇ ಮೊದಲನೇ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದಿರಿ ಎಂದರೆ ಸಾಕ್ಷಿಯು ಈ ಹಿಂದೆ ಪೋಲಿಸ ಠಾಣೆಯಲ್ಲಿ ನೋಡಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ನನ್ನ ಹೇಳಿಕೆಗಳನ್ನು ಕೊಟ್ಟ 2-3 ದಿನಗಳ ನಂತರ ಪೋಲಿಸರು ಗುನ್ನಾ ಸ್ಥಳಕ್ಕೆ ಬಂದಿದ್ದರು. ಸದರಿ ದಿನದ ದಿನಾಂಕ ಹಾಗೂ ತಿಂಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಮೃತ ಸಿದ್ದಪ್ಪ ಅರ್ಜುನ ನಾಯಕ ರವರು ನನ್ನ ಸಂಬಂಧಿಕರು ಆಗಿರುತ್ತಾರೆ ಎಂದರೆ ಸರಿ. ಯಾರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಕ್ರೂಶರ ವಾಹನದ ಚಾಲಕ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಚಾಸಾ-1 ರವರು ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ಮೃತ ಸಿದ್ದಪ್ಪ ಅರ್ಜುನ ನಾಯಕ ರವರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಗೊತ್ತಿದ್ದರೂ ಕೂಡಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** --ಇಲ್ಲಾ--

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ಶ್ರೀಮತಿ. ಸೂರ್ಯ ಪ್ರಭಾ ಎಚ್.ಡಿ)
**ಹೆ.ದಿ.&ನ್ಯಾದಂ.,ಗೋಕಾಕ.**

**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ**

ಸಿ.ಸಿ. ನಂಬರಃ **889/2020**

ದಿಃ **12-01-2023** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಸಿಡಬ್ಲೂಃ **5** ಪಿಡಬ್ಲೂಃ **3**

| | | |
|---|---|---|
| ಹೆಸರು | : | ಈರಪ್ಪ ರಾಮಪ್ಪ ನಾಯಕ |
| ತಂದೆ ಹೆಸರು | : | ರಾಮಪ್ಪ ನಾಯಕ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಮೆಕ್ಕಲಿ, ತಾ ರಾಯಭಾಗ |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-1 ರಿಂದ 4, 8 ಮತ್ತು 9 ರವರ ಪರಿಚಯವಿದೆ. ಆರೋಪಿಯ ಪರಿಚಯವಿರುವುದಿಲ್ಲ. ಮೃತ ಸಿದ್ದಪ್ಪ ಅರ್ಜುನ ನಾಯಕ ರವರ ಪರಿಚಯವಿರುತ್ತದೆ. ಸದರಿ ಅವರು 3 ವರ್ಷಗಳ ಹಿಂದ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಗುನ್ನಾ ಸ್ಥಳ ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

2019 ರಂದು ಸಜ್ಜಾಳ ಕ್ರಾಸ ಹತ್ತಿರ ಬೆಳಿಗ್ಗೆ 9 ರಿಂದ 10 ಗಂಟೆ ಸಮಯದವರೆಗೆ ಪೋಲಿಸರು ನನ್ನ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ. ಅದೇ ಸಂದರ್ಭದಲ್ಲಿ ನನ್ನ ಸಹಿಯನ್ನು ನಿಪಿ-3 ದಾಖಲೆಗೆ ಪಡೆದುಕೊಂಡಿರುತ್ತಾರೆ. ಅದೇ ಸಂದರ್ಭದಲ್ಲಿ ಒಂದು ಭಾವಚಿತ್ರವನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿಯ

ಸದರಿ ಭಾವಚಿತ್ರದಲ್ಲಿ ತಾನು ಇರುವುದಾಗಿ ಗುರುತಿಸಿದ್ದು ಸದರಿ ಭಾವಚಿತ್ರವನ್ನು ನಿಶಾನೆಯಾಗಿ ಗುರುತಿಸುವ ಸಂದರ್ಭದಲ್ಲಿ ಆರೋಪಿ ಪರ ವಕೀಲರು ತಕರಾರು ವ್ಯಕ್ತಪಡಿಸಿದ್ದು ಸದರಿ ತಕರಾರಿಗೆ ಒಳಪಟ್ಟು ಸದರಿ ಭಾವಚಿತ್ರವನ್ನು ಈಗಾಗಲೇ ನಿಪಿ-4 ಎಂದು ನಿಶಾನೆಯಾಗಿ ಗುರುತಿಸಲಾಗಿದೆ. ಈ ಬಗ್ಗೆ ನಾನು ನನ್ನ ಹೇಳಿಕೆಗಳನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ.

ಅಪಘಾತದ ದಿನದಂದು ಮೃತ ಸಿದ್ದಪ್ಪ ನಾಯಕ ರವರು ಚಾಸಾ-1 ರವರೊಂದಿಗೆ ಉದಗಟ್ಟಿ ಗ್ರಾಮದ ಉದ್ದಮ್ಮ ದೇವಿಯ ದೇವಸ್ಥಾನಕ್ಕೆ ತಮ್ಮ ಮೋಟಾರ ಸೈಕಲನಲ್ಲಿ ಹೋಗಿದ್ದರು. ಸದರಿ ಅವರು ರಸ್ತೆಯ ಬದಿಗೆ ಒಂದಕ್ಕಾಗಿ ಹೋಗಿದ್ದಾಗ ಒಂದು ಕ್ಲೂಜರ ವಾಹನ ಬಂದು ಅವರಿಗೆ ಅಪಘಾತ ಪಡಿಸಿರುತ್ತದೆ. ಸದರಿ ವಿಷಯವನ್ನು ನನಗೆ ಚಾಸಾ-1 ರವರು ತಿಳಿಸಿರುತ್ತಾರೆ. ಈ ಬಗ್ಗೆ ನಾನು ಪೋಲಿಸರಿಗೆ ನನ್ನ ಹೇಳಿಕೆಗಳನ್ನು ಕೊಟ್ಟಿರುತ್ತೇನೆ.

ತದನಂತರ ಪೋಲಿಸರು ನನ್ನನ್ನು ಕುಲಗೋಡ ಪೋಲಿಸ ಠಾಣೆಗೆ ಕರೆದು ಸದರಿ ಪ್ರಕರಣದಲ್ಲಿ ಆರೋಪಿತನಾದ ರಾಯಪ್ಪ ಲಕ್ಕಪ್ಪ ಕೆಮ್ಮನಕೋಲ ರವರನ್ನು ತೋರಿಸಿರುತ್ತಾರೆ. ಸದರಿ ಆರೋಪಿ ಮೃತ ಸಿದ್ದಪ್ಪ ಅರ್ಜುನ ನಾಯಕ ರವರಿಗೆ ಡಿಕ್ಕಿ ಪಡಿಸಿದ ಕ್ಲೂಜರ ವಾಹನದ ಚಾಲಕರು ಆಗಿದ್ದರು ಎಂದು ತಿಳಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>**

ಪಂಚನಾಮೆ ಮಾಡುವ ಕಾಲಕ್ಕೆ ಪೋಲಿಸರು ನನಗೆ ಪೋನ ಮಾಡಿ ಕರೆದಿರುತ್ತಾರೆ. ಸದರಿ ಅವರು ಯಾವ ಸಂಖ್ಯೆಯಿಂದ ಕರೆ ಮಾಡಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ಇದಕ್ಕಿಂತ ಮೊದಲು ನನ್ನ ಪೋನ ನಂಬರ ಅವರ ಬಳಿ ಇರಲಿಲ್ಲ ಎಂದರೆ ಸರಿ. ಸಜ್ಜಾಳ ಕ್ರಾಸದಲ್ಲಿ ಕೂಲಿ ಮಾಡುವವರು ಹಾಗೂ ಕೆಲಸ ಮಾಡುವವರು

ಓಡಾಡುತ್ತಾರೆ ಎಂದರೆ ಸರಿ. ಪೋಲಿಸರು ಗುನ್ನಾ ಸ್ಥಳಕ್ಕೆ ಹೋಗಿ ಬಂದ ನಂತರ ಠಾಣೆಗೆ ಬಂದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಪೋಲಿಸರು ಏನು ಬರೆದಿದ್ದರು ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನ್ನ ಹೇಳಿಕೆಗಳಲ್ಲಿ ಪೋಲಿಸರು ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನನ್ನ ಹೇಳಿಕೆಗಳನ್ನು ಪೋಲಿಸರು 2 ಬಾರಿ ಪಡೆದುಕೊಂಡಿರುತ್ತಾರೆ ಯಾವ ದಿನಾಂಕ ನನಗೆ ಗೊತ್ತಿರುವುದಿಲ್ಲ. ನನ್ನ ಹೇಳಿಕೆಗಳಲ್ಲಿ ಪೋಲಿರು ಏನು ಬರೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಮೃತ ಸಿದ್ದಪ್ಪ ಅರ್ಜುನ ನಾಯಕ ರವರು ನನ್ನ ಕಾಕಾ ಆಗಿರುತ್ತಾರೆ. ಅಪಘಾತವು ಮೃತ ಸಿದ್ದಪ್ಪ ಅರ್ಜುನ ನಾಯಕ ರವರ ತಪ್ಪಿನಿಂದ ಆಗಿದ್ದರೂ ಕೂಡಾ ಕ್ಲೂಜರ ವಾಹನದ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** --ಇಲ್ಲಾ--

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ಶ್ರೀಮತಿ. ಸೂರ್ಯ ಪ್ರಭಾ ಎಚ್.ಡಿ)
ಹೆ.ದಿ.&ನ್ಯಾದಂ.,ಗೋಕಾಕ.